ಕೆ.ಎಂ.ಎಫ್

RNI NO : 29773/77 Registered No/RNP/KA/BGS-103/2015-17
Date of Publication 26th December 2017; Posted at Bengaluru
PSO Mysuru Road, BG 560 026 on 28th of every month
Licensed to post without Pre-payment WPP No. -3

# ಕ್ಷೀರಸಾಗರ

KSHEERASAGAR MONTHLY

ವಾರ್ಷಿಕ ಚಂದಾ ರೂ. 50.00

ಸಂಪುಟ Vol - 43 | ಜನವರಿ JANUARY - 2018 | ಸಂಚಿಕೆ Issue - 1 | ಪುಟ Pages - 12

ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

## ನೂತನ ನಂದಿನಿ ಫ್ಲೆಕ್ಸಿ ಘಟಕ : ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಉದ್ಘಾಟನೆ




ಬೆಳಗಾವಿ ಹಾಲು ಒಕ್ಕೂಟದ ಆವರಣದಲ್ಲಿ ಕಹಾಮದ ಸಹಯೋಗದಿಂದ ರೂ.20.00 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಫ್ಲೆಕ್ಸಿ ಘಟಕವನ್ನು ದಿನಾಂಕ 23/11/2017ರ ಗುರುವಾರದಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ. ಸಿದ್ಧರಾಮಯ್ಯ** ನವರು ಉದ್ಘಾಟಿಸಿದರು. ಸಮಾರಂಭದಲ್ಲಿ ಸನ್ಮಾನ್ಯ ಸಹಕಾರ ಸಚಿವರು ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ **ಶ್ರೀ. ರಮೇಶ ಲ ಜಾರಕಿಹೊಳಿ,** ಸನ್ಮಾನ್ಯ ಪಶುಸಂಗೋಪನಾ ಸಚಿವರಾದ **ಶ್ರೀ. ಎ. ಮಂಜು,** ವಿಧಾನ ಪರಿಷತ್ ಸದಸ್ಯರು ಹಾಗೂ ಒಕ್ಕೂಟದ ಅಧ್ಯಕ್ಷರಾದ **ಶ್ರೀ. ವಿವೇಕ ವ್ಹಿ ಪಾಟೀಲ,** ಲೋಕಸಭಾ ಸದಸ್ಯರಾದ **ಶ್ರೀ. ಪ್ರಕಾಶಹುಕ್ಕೇರಿ,** ಬೆಳಗಾವಿ ಉತ್ತರ ಭಾಗದ ಶಾಸಕರಾದ **ಶ್ರೀ. ಫಿರೋಜ ಸೇಠ್,** ಜಲಸಂಪನ್ಮೂಲ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಹಾಮ ವ್ಯ.ನಿ.ರಾದ **ಶ್ರೀ. ರಾಕೇಶ್ ಸಿಂಗ್,** ಐ.ಎ.ಎಸ್., ಹಾಗೂ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.

ಹೈನುಗಾರಿಕೆಯ ತಂತ್ರಜ್ಞಾನದ ಬೆಳವಣಿಗೆ ಹಾಗೂ ಹೊಸ ಅವಿಷ್ಕಾರಗಳ ಫಲವಾಗಿ ಇಂದು ಹಾಲನ್ನು ಶ್ಯಾಚೆಯಲ್ಲಿ ತುಂಬಿ ವಾತಾವರಣದ ತಾಪಮಾನದಲ್ಲಿ ತಿಂಗಳು ಬಾಳಿಕೆಯ ಕಾಲಾವಧಿಯನ್ನು ವಿಸ್ತರಿಸಲು ಸಾಧ್ಯವಾಗಿದೆ. ಈ ರೀತಿ ಹಾಲಿನ ಬಾಳಿಕೆಯನ್ನು ಮೂರು ತಿಂಗಳವರೆಗೆ ವಾತಾವರಣದ ತಾಪಮಾನದಲ್ಲಿ ವೃದ್ಧಿಸುವ ತಂತ್ರಜ್ಞಾನವೇ **UHT – ULTRA HEAT TREATMENT.**

ಒಟ್ಟು ರೂ.20.00ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ **RKVY** ಯೋಜನೆಯಾಡಿ 8.06 ಕೋಟಿ ರೂ. ಅನುದಾನ ದೊಂದಿಗೆ ನಿರ್ಮಾಣಗೊಂಡ ಘಟಕದಲ್ಲಿ ಫಿನ್‌ಲ್ಯಾಂಡನ ಯಂತ್ರೋಪಕರಣಗಳನ್ನು ಅಳವಡಿಸಿ, ಕಹಾಮದಿಂದ ಒಕ್ಕೂಟಕ್ಕೆ ಹಸ್ತಾಂತರಿಸಿರುತ್ತಾರೆ.

ಫ್ಲೆಕ್ಸಿ ಪ್ಯಾಕಿಂಗ್‌ಗಾಗಿ ಸಂಸ್ಕರಿಸಿದ ಹಾಲಿನಲ್ಲಿ ರೋಗಕಾರಕ ಹಾಗೂ ರೋಗಕಾರಕವಲ್ಲದ ಎಲ್ಲ ಬ್ಯಾಕ್ಟೀರಿಯಾ–ಗಳು ನಾಶ ಹೊಂದಿರುತ್ತವೆ. ಇದರಿಂದಾಗಿ ಹಾಲಿನ ಬಾಳಿಕೆ ಅವಧಿಯು ವೃದ್ಧಿಯಾಗಿ ವಾತಾವರಣದ ತಾಪಮಾನದಲ್ಲಿಯೇ ಹಾಲನ್ನು ಸಂಗ್ರಹಿಸಿ ಉಪಯೋಗಿಸಲೂಬಹುದು, ಹಾಗೂ ಮಾರಾಟ ಮಾಡಲುಬಹುದು. ಫ್ಲೆಕ್ಸಿ ಪ್ಯಾಕ್ ಹಾಲಿನಿಂದ ಹಾಲು ಉತ್ಪಾದಕರಿಗೆ, ಹೈನು ಉದ್ಯಮಕ್ಕೆ ಹಾಲು ಮಾರಾಟಗಾರರಿಗೆ ಹಾಗೂ ಗ್ರಾಹಕರಿಗೆ ಹಲವಾರು ಅನುಕೂಲತೆ ಉಂಟಾಗುವುದು. ಅವುಗಳಲ್ಲಿ ಪ್ರಮುಖ ಅನುಕೂಲತೆಗಳು ಕೆಳಗಿನಂತಿವೆ:

**ಉತ್ಪಾದಕರ ಹಾಲಿಗೆ ನಿರಂತರವಾಗಿ ಸ್ಪರ್ಧಾತ್ಮಕ ದರದಲ್ಲಿ ಮಾರುಕಟ್ಟೆ ಮತ್ತು ಗ್ರಾಹಕರಿಗೆ ವರ್ಷದ ಎಲ್ಲಾ ದಿನಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ಹಾಲಿನ ಪೂರೈಕೆಗೆ ಅನುಕೂಲತೆ.**

**ಫ್ಲೆಕ್ಸಿ ಪ್ಯಾಕಿಂಗನಿಂದಾಗಿ ಪ್ಯಾಕ್‌ಗೊಂಡ ಹಾಲನ್ನು ದಾಸ್ತಾನು ಮಾಡಲು, ಸಾಗಾಣಿಕೆ ಮಾಡಲು, ಶೀತಲಿಕರಣ ವ್ಯವಸ್ಥೆಯು ಅವಶ್ಯಕತೆ ಇಲ್ಲದ್ದರಿಂದ ಆರ್ಥಿಕ ಹೊರೆ ಕಡಿಮೆಯಾಗಿ ಹೈನು ಉದ್ಯಮ ಲಾಭದತ್ತ ಸಾಗಲು ಅನುಕೂಲ.**

**ಫ್ಲೆಕ್ಸಿ ಸಂಸ್ಕರಿತ ಹಾಲಿಗೆ ಶೀತಲಿಕರಣ ವ್ಯವಸ್ಥೆಯ ಅವಶ್ಯಕತೆ ಇಲ್ಲದ್ದರಿಂದ ಸುದೀರ್ಘ ಬಾಳಿಕೆ ಅವಧಿ ಇರುವುದರಿಂದ, ನಿರ್ವಹಣಾ ವೆಚ್ಚದಲ್ಲಿ ಕಡಿತವಾಗಿ, ಲಾಭಾಂಶದಲ್ಲಿ ಹೆಚ್ಚಳವಾಗಿ, ಹೆಚ್ಚೆಚ್ಚು ಪ್ರಮಾಣದಲ್ಲಿ ಹಾಲು ಮಾರಾಟ ಮಾಡಲು ಮಾರಾಟಗಾರರು ಉತ್ಸುಕರಾಗುತ್ತಾರೆ.**



ನಂದಿನಿ ಫ್ಲೆಕ್ಸಿ ಪ್ಯಾಕ್ ಹಾಲಿನ ಬಗ್ಗೆ ಮಾಹಿತಿ ಪಡೆಯುತ್ತಿರುವ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು.

# ನೂತನ ವರ್ಷದ ಶುಭಾಷಯಗಳು ಮತ್ತು ಸಂದೇಶ



ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಹಾಲು ಮಹಾಮಂಡಳಿ

ಕರ್ನಾಟಕ ರಾಜ್ಯದ ಸಮಸ್ತ ಹಾಲು ಉತ್ಪಾದಕರಿಗೆ ಹೊಸ ವರ್ಷದ ಹಾರ್ದಿಕ ಶುಭಾಷಯಗಳನ್ನು ತಿಳಿಸುತ್ತಾ, ಸಕಲರಿಗೂ ಸುಖ, ಸಂತೋಷ, ಶಾಂತಿ, ನೆಮ್ಮದಿ ಸಿಗುವಂತಾಗಲಿ ಎಂದು ಹಾರೈಸುತ್ತೇನೆ.

2017ರಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಯು ಪ್ರಗತಿಯಲ್ಲಿ ಗಮನಾರ್ಹವೆನಿಸುವ ಮಹತ್ವದ ಬೆಳವಣಿಗೆಗಳಾಗಿವೆ. 2017–18ನೇ ಸಾಲಿನಲ್ಲಿ ಈ ವರೆಗೆ ಮಹಾ ಮಂಡಳಿಯು ದಾಖಲೆಯ ಗರಿಷ್ಠ ಪ್ರಮಾಣದ ಹಾಲು ಶೇಖರಣೆ ಮತ್ತು ಹಾಲು ಮಾರಾಟದಲ್ಲಿ ಉತ್ತಮ ಸಾಧನೆಗೈದಿದೆ, ಬೆಳೆಯುತ್ತಿರುವ ಹಾಲು ಶೇಖರಣೆ ಪ್ರಮಾಣವನ್ನು ಗುಣಮಟ್ಟ ಕಾಪಾಡಿಕೊಂಡು ದಕ್ಷ ರೀತಿಯಲ್ಲಿ ಸಂಸ್ಕರಿಸಿ ವಿಲೇವಾರಿ ಮಾಡಲು ಒಕ್ಕೂಟಗಳಲ್ಲಿ ಮತ್ತು ಕಹಾಮ ಘಟಕಗಳಲ್ಲಿ ಅನೇಕ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಲು ಯೋಜಿಸಲಾಗುತ್ತಿದೆ. ಈಗಾಗಲೇ ಚನ್ನರಾಯಪಟ್ಟಣ ಹಾಲು ಪುಡಿಯ ಘಟಕದ ವಿಸ್ತರಣೆ, ವಿವಿಧ ಒಕ್ಕೂಟಗಳಲ್ಲಿ ಫ್ಲೆಕ್ಷಿ ಮತ್ತು ಯೂಹೆಚ್‌ಟಿ ಹಾಲಿನ ಘಟಕಗಳು, ಪಶುಆಹಾರ ಘಟಕಗಳಲ್ಲಿ ಬೃಹತ್ ಗೋದಾಮುಗಳು, ನೂತನ ಶೀತಲಕೇಂದ್ರಗಳು ಮತ್ತು ಡೇರಿಗಳ ಸಂಸ್ಕರಣಾ ಸಾಮರ್ಥ್ಯಗಳ ಬಲವರ್ಧನೆ ಮಾಡಲಾಗಿದೆ. ಭವಿಷ್ಯದಲ್ಲಿ ಹೆಚ್ಚುವರಿ ಹಾಲಿನ ಪರಿವರ್ತನೆಗೆ ರಾಮನಗರದ ಸಮೀಪ ಅತ್ಯಾಧುನಿಕ ಬೃಹತ್ ಹಾಲು ಪರಿವರ್ತನಾ ಘಟಕ ಮತ್ತು ಕನಕಪುರ ಉತ್ಪನ್ನ ಘಟಕಗಳ ನಿರ್ಮಾಣ ಕಾರ್ಯಗಳು ಭರದಿಂದ ಸಾಗಿವೆ. ಇದರೊಂದಿಗೆ ಹಾಸನದಲ್ಲಿ ಐಸ್‌ಕ್ರೀಂ ಘಟಕ, ಮೈಸೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ಉಪ್ಪೂರು, ಮಂಡ್ಯ ಮತ್ತು ಕೊಪ್ಪಳದಲ್ಲಿ ನೂತನ ಡೇರಿಗಳ ಹಾಗೂ ಧಾರವಾಡದಲ್ಲಿ ನೂತನ ಹಾಲಿನ ಪುಡಿ ಘಟಕದ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. ಇವುಗಳೊಂದಿಗೆ ಎಲ್ಲ ಒಕ್ಕೂಟಗಳಲ್ಲಿ ಮತ್ತು ಘಟಕಗಳಲ್ಲಿ ಮೂಲಭೂತ ಸೌಲಭ್ಯಗಳ ಬಲವರ್ಧನೆಯಾಗುತ್ತಿದ್ದು, ಭವಿಷ್ಯದಲ್ಲಿ ಉತ್ಕೃಷ್ಟ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ತಯಾರಿಸಲು ಸನ್ನದ್ಧುಗೊಳಿಸಲಾಗುತ್ತಿದೆ.

ಕರ್ನಾಟಕ ಹಾಲು ಮಹಾಮಂಡಳಿಯ ಒಕ್ಕೂಟಗಳ ಡೇರಿಗಳಲ್ಲಿ ಉತ್ಕೃಷ್ಟ ಗುಣನಿರ್ವಹಣೆಯ ವ್ಯವಸ್ಥೆಗಳಿಗಾಗಿ ಐಎಸ್‌ಓ–22000 ಅಂತರಾಷ್ಟ್ರೀಯ ಮಾನದಂಡದ ದೃಢೀಕರಣಗಳನ್ನು ಪಡೆಯಲಾಗಿದೆ. ಇತ್ತೀಚೆಗೆ ಭಾರತ ಸರ್ಕಾರದ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು ಪ್ರಾರಂಭಿಸಿರುವ ಕ್ವಾಲಿಟಿ ಮಾರ್ಕ್ ದೃಢೀಕರಣ ದೇಶದ 21 ಡೇರಿಗಳಿಗೆ ಲಭಿಸಿದ್ದು, ಅವುಗಳಲ್ಲಿ 11 ಡೇರಿಗಳು ಕರ್ನಾಟಕ ಹಾಲು ಮಹಾಮಂಡಳಿಯದಾಗಿದೆ ಎಂಬುದು ಹೆಮ್ಮೆಯ ವಿಷಯವಾಗಿದ್ದು, ರಾಷ್ಟ್ರಮಟ್ಟದಲ್ಲಿ ಪ್ರಶಂಸೆ ಗಳಿಸಿದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು ಉತ್ತಮ ಸಾಧನೆ ಮಾಡಿರುವ ದಕ್ಷಿಣ ಕನ್ನಡ ಹಾಲು ಒಕ್ಕೂಟಕ್ಕೆ ರಾಷ್ಟ್ರಮಟ್ಟದ ಡೇರಿ ಉತ್ಕೃಷ್ಟತಾ ಪ್ರಶಸ್ತಿ ಹಾಗೂ ಬೆಂಗಳೂರು ಮತ್ತು ಶಿವಮೊಗ್ಗ ಹಾಲು ಒಕ್ಕೂಟಗಳಿಗೆ ದಕ್ಷಿಣ ಪ್ರಾಂತ್ಯ ಮಟ್ಟದ ಡೇರಿ ಉತ್ಕೃಷ್ಟತಾ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿದೆ. ಈ ಎಲ್ಲ ಮನ್ನಣೆಗಳು ನಮ್ಮ ಒಕ್ಕೂಟಗಳು ಎಲ್ಲ ಪ್ರಗತಿಯ ಮಾನಕಗಳಲ್ಲಿ ಉತ್ತಮ ಪ್ರಗತಿ ಸಾಧಿಸಿ, ನಮ್ಮ ಹಾಲು ಉತ್ಪಾದಕರಿಗೆ ಉತ್ತಮ ಸೇವೆ ನೀಡುತ್ತಿರುವ ಶ್ರಮಗಳಿಗೆ ನೀಡಿರುವ ಮನ್ನಣೆಗಳಾಗಿವೆ.

ನೂತನ ವರ್ಷದಲ್ಲಿ ರಾಜ್ಯದ ಹಾಲು ಉತ್ಪಾದಕರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳ ಅನುಷ್ಠಾನ, ಪಶುಆಹಾರ ಉತ್ಪಾದನೆಯ ಹೆಚ್ಚಳಕ್ಕಾಗಿ ಸಾಮರ್ಥ್ಯಗಳ ಬಲವರ್ಧನೆ, ಹೆಚ್ಚುತ್ತಿರುವ ಹಾಲಿನ ಸಂಸ್ಕರಣೆಗಾಗಿ ಡೇರಿ ಸಾಮರ್ಥ್ಯಗಳ ಬಲವರ್ಧನೆ, ಗುಣಮಟ್ಟದ ಹಾಲಿನ ಶೇಖರಣೆಗಾಗಿ ಶೇಖರಣಾ ವ್ಯವಸ್ಥೆಗಳ ಬಲವರ್ಧನೆ, ಹಾಲಿನ ಲಾಭದಾಯಕ ವಿಲೇವಾರಿಗಾಗಿ ಮೌಲವರ್ಧಿತ ಹಾಲಿನ ಉತ್ಪನ್ನಗಳ ಉತ್ಪಾದನೆ, ಮಾರಾಟ ಬೆಳವಣಿಗೆಗಾಗಿ ಮಾರುಕಟ್ಟೆ ವಿಸ್ತರಣೆ, ಮಹಿಳಾ ಹಾಲು ಉತ್ಪಾದಕರ ಸಬಲೀಕರಣ ಕಾರ್ಯಕ್ರಮಗಳಿಗೆ ಒತ್ತು ನೀಡಲು ಶ್ರಮಿಸಲಾಗುವುದು.

ಕರ್ನಾಟಕ ಹಾಲು ಮಹಾಮಂಡಳಿಯು ರಾಜ್ಯದ ಸಮಸ್ತ ಹಾಲು ಉತ್ಪಾದಕರ ಮತ್ತು ರಾಜ್ಯದ ಸಹಕಾರಿ ಹೈನೋದ್ಯಮದ ನಿರೀಕ್ಷೆಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಾಕಾರಗೊಳಿಸಲು ಶ್ರದ್ಧೆ ಹಾಗೂ ಅರ್ಪಣಾ ಮನೋಭಾವದಿಂದ ಪಣ ತೊಟ್ಟು ಶ್ರಮಿಸಲಾಗುವುದು. 2018ರ ನೂತನ ವರ್ಷದಲ್ಲಿ ನಮ್ಮ ನೆಚ್ಚಿನ ಹಾಲು ಉತ್ಪಾದಕರ ಅಭಿಲಾಷೆಗಳೆಲ್ಲ ನನಸಾಗಿ, ಅವರ ಬದುಕು ಬಂಗಾರವಾಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

## ರಾಜ್ಯ ಸರ್ಕಾರದಿಂದ ಅನುಷ್ಠಾನಗೊಂಡ ಪ್ರತಿಷ್ಠಿತ ಯೋಜನೆ – ಕ್ಷೀರಭಾಗ್ಯ

### ಅಪೌಷ್ಟಿಕತೆ ದೂರ ಮಾಡಲು ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆ

- ವಾರದಲ್ಲಿ ಐದು ದಿನ ಕಾಲ ಹಾಲು ವಿರತಣೆ
- ಅಂಗನವಾಡಿಯಿಂದ 10ನೇ ತರಗತಿ ತನಕ ಮಕ್ಕಳಿಗೆ
- 51 ಸಾವಿರ ಶಾಲೆಗಳ 65 ಲಕ್ಷ ಮಕ್ಕಳು
- 64 ಸಾವಿರ ಅಂಗನವಾಡಿಗಳ 39 ಲಕ್ಷ ಮಕ್ಕಳು
- ಪ್ರತಿ ನಿತ್ಯ ಶಾಲಾ ಮಕ್ಕಳಿಗೆ ತಲಾ 5.25 ರೂ.
- ಪ್ರತಿ ನಿತ್ಯ ಅಂಗನವಾಡಿ ಮಕ್ಕಳಿಗೆ ತಲಾ 3.64 ರೂ.
- ಪ್ರತಿ ನಿತ್ಯ 90 ಟನ್ ಹಾಲಿನ ಪುಡಿ ಖರ್ಚು
- ಶೀಘ್ರದಲ್ಲಿಯೇ ಚಾಯೋಲೇಟ್ ಹಾಗೂ ಏಲಕ್ಕಿ ಸುವಾಸನೆಯ ಹಾಲು

- **ಕ್ಷೀರಭಾಗ್ಯ ಉದ್ದೇಶಗಳೇನು :**
- ಮಕ್ಕಳ ಆರೋಗ್ಯ ಕಾಪಾಡುವುದು
- ಮಕ್ಕಳನ್ನು ಕಾಡುವ ಅಪೌಷ್ಟಿಕತೆ ಬ್ರೇಕ್
- ಶಾಲೆ ಕಡೆ ಮಕ್ಕನ್ನು ಹೆಷ್ಚಾಗಿ ಆಕರ್ಷಣೆ ಮಾಡುವುದು
- ಮಕ್ಕಳಿಗೆ ಪ್ರೋಟಿನ್, ಕಾರ್ಬೋಹೈಡ್ರೇಡ್, ವಿಟಮಿನ್ ಒಟ್ಟಿಗೆ ಲಭ್ಯ.





# ಎರೆಗೊಬ್ಬರ ತಯಾರಿಯಲ್ಲಿ ಕ್ರಾಂತಿ



**ಮಂಗಳೂರಿನ ನಿವೃತ್ತ ಪ್ರಾಧ್ಯಾಪಕರೊಬ್ಬರು ಎರೆಗೊಬ್ಬರ ತಯಾರಿಕೆಯ ಕಾಯಕದಲ್ಲಿ ಒಂದೂವರೆ ದಶಕದಿಂದ ತೊಡಗಿದ್ದು, ರೈತರ ಹೊಲಗಳಿಗೆ ಉಪಯುಕ್ತ ಸಾವಯುವ ಗೊಬ್ಬರ ನೀಡುತ್ತಿದ್ದಾರೆ. ಇವರಿಂದ ಹಲವು ವಿದ್ಯಾಸಂಸ್ಥೆಗಳು, ಕೆಲ ಸ್ಥಳೀಯ ಅಡಳಿತಗಳು ಪ್ರೇರಣೆ ಪಡೆದುಕೊಂಡಿವೆ.**

ಪ್ರಾಣಿಶಾಸ್ತ್ರ ವಿಭಾಗ ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ಹರೀಶ್ ಜೋಶಿ 2002ರಿಂದ ಎರೆ ಗೊಬ್ಬರ ಸಿದ್ಧಪಡಿಸುತ್ತಿದ್ದು, ಇದಕ್ಕಾಗಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಅವರ ಎರೆಗೊಬ್ಬರದ ಮಾದರಿ (ಇಟ್ಟಿಗೆ ತೊಟ್ಟಿ)ಯನ್ನು 'ಎಂ.ಜಿ. ನರೇಗಾ' ಒಪ್ಪಿಕೊಂಡಿದೆ. ಅದೇ ಮಾದರಿ ಅನುಸರಿಸಿ ಗೊಬ್ಬರ ತಯಾರಿಸುವಂತೆ ಸಲಹೆ ನೀಡುತ್ತಿದೆ. ಬೃಹತ್ ಪ್ರಮಾಣದಲ್ಲಿ ತಯಾರಿಸುವವರಿಗೆ ಈ ಮಾದರಿ ಉತ್ತಮವಾದರೆ, ಮನೆಗಳಲ್ಲಿ ತಯಾರಿಸುವವರಿಗೆ ಗೊಬ್ಬರ ತಯಾರಿಕೆಯ ಪೆಟ್ಟಿಗೆ-ಯೊಂದನ್ನೂ ಜೋಶಿಯವರೆ ನಿರ್ಮಿಸಿದ್ದಾರೆ.

**ತಯಾರಿ ವಿಧಾನ :** ಎರೆಗೊಬ್ಬರ ತಯಾರಿಕೆಗೆ ತೊಟ್ಟಿ ಅಳತೆ ಇಂತಿಷ್ಟೇ ಎಂದಿಲ್ಲ. ಮನೆಯಲ್ಲಿ ಗೊಬ್ಬರ ತಯಾರಿಸುವುದಾದರೆ ಎರಡು ಅಡಿ ಅಗಲ, ಮೂರೂವರೆ ಅಡಿ ಉದ್ದ ಮತ್ತು ಎರಡು ಅಡಿ ಎತ್ತರವಿರುವ ಎರಡು ವಿಭಾಗಗಳಿರುವ ತೊಟ್ಟಿ ಸಾಕು, ಮನೆಯಲ್ಲಿ ಉತ್ಪತ್ತಿಯಗುವ ತ್ಯಾಜ್ಯವನ್ನು (ಮಾಂಸ ಹೊರತು ಪಡಿಸಿ) ಹಾಕಬಹುದು. ಬೃಹತ್ ಮಟ್ಟದಲ್ಲಿ ಮಾಡುವುದಾದರೆ ಜಾಗ ಅವಲಂಬಿಸಿ ಇಟ್ಟಿಗೆಗಳ ತೊಟ್ಟಿ ನಿರ್ಮಿಸಬಹುದು. ಗೊಬ್ಬರಕ್ಕೆ ಮೂಲ ವಸ್ತುಗಳಾಗಿ ಹುಲ್ಲು, ತೆಂಗಿನ ಗರಿ, ಬಾಳೆ ತ್ಯಾಜ್ಯ, ಅಡಕೆ ಗರಿ, ಕಬ್ಬಿನ ಹೊರಸಿಪ್ಪೆ, ಕಬ್ಬಿನ ಹಾಲು ಹಿಂಡಿದ ಸಿಪ್ಪೆ, ದವಸಧಾನ್ಯ ಬೆಳೆದ ನಂತರ ಉಳಿಯುವ ಒಣ ಪದಾರ್ಥಗಳು, ಗೋಬರ್ ಗ್ಯಾಸ್‌ನಿಂದ ದೊರೆಯುವ ಹುಡಿಗೊಬ್ಬರ ಮೊದಲಾದವುಗಳು ಎರೆ ಗೊಬ್ಬರಕ್ಕೆ ಕಚ್ಚಾವಸ್ತುಗಳು, ಕಾಗದ, ರಟ್ಟಿನ ತ್ಯಾಜ್ಯವನ್ನು ಒಂದೆರಡು ಸಲ ನೀರಿನಲ್ಲಿ ತೊಳೆದು ಬಳಸಬಹುದು. ಈ ತ್ಯಾಜಗಳನ್ನು ತೊಟ್ಟಿಯ ಒಂದು ಭಾಗದಲ್ಲಿ ಮೂರು ವಾರಗಳ ವರೆಗೆ ಕೊಳೆಯಲು ಬಿಡಬೇಕು. ಜತೆಗೆ ಆಗಾಗ ಸ್ವಲ್ಪ ನೀರನ್ನು ಚಿಮುಕಿಸಬೇಕು. ಮೂರನೇ ವಾರದ ಆರಂಭದಲ್ಲಿ ಎರೆಹುಳು-ಗಳನ್ನು ತೊಟ್ಟಿಗೆ ಬಿಡಬೇಕು. ಬೃಹತ್ ಮಟ್ಟದ ತಯಾರಿಕೆಗೆ ಎರಡು ಕೆ.ಜಿ.ಯಷ್ಟು ಹುಳು ಉಪಯೋಗಿಸಬಹುದು.

ಮನೆಯಲ್ಲಿ ಬಾಕ್ಸ್‌ಗಳಲ್ಲಿ ಮಾಡುವುದಾದರೆ ಅರ್ಧ ಕೆ.ಜಿ.ಯಷ್ಟು ಹುಳು ಸಾಕು. ಹುಳು ಹಾಕಿದ ಬಳಿಕ ತ್ಯಾಜ್ಯ ಹಾಕುವಂತಿಲ್ಲ. ಆದರೆ, ತೊಟ್ಟಿಯ ಇನ್ನೊಂದು ಭಾಗದಲ್ಲಿ ಅದನ್ನು ಶೇಖರಿಸುತ್ತಾ ಬರಬಹುದು. ತೊಟ್ಟಿಯಲ್ಲಿ ಹುಳುಗಳು ಅಡಿಭಾಗಕ್ಕೆ ಹೋಗಿ ಸೇರಿಕೊಂಡು ಅಲ್ಲಿ ತ್ಯಾಜ್ಯ ತಿನ್ನಲು ಪ್ರಾರಂಭಿಸುತ್ತವೆ. 8–10 ದಿನಗಳ ನಂತರ ತೊಟ್ಟಿಯ ತ್ಯಾಜ್ಯ ನಿಧಾನವಾಗಿ ತಗ್ಗಿಅರ್ಧದಷ್ಟಾಗುತ್ತದೆ. ಮೇಲ್ಭಾಗದಲ್ಲಿ ಎರೆಹಿಕ್ಕೆ ಕಾಣಿಸುತ್ತದೆ. ಒಟ್ಟಾರೆಯಾಗಿ ಸುಮಾರು ಒಂದು ತಿಂಗಳಲ್ಲಿ ವಾಸನೆ ರಹಿತವಾದ ಕಪ್ಪು, ಮೃದುವಾದ ಗೊಬ್ಬರ ಸಿಗುತ್ತದೆ. ಇದೇ ವೇಳೆ ತೊಟ್ಟಿಯಲ್ಲಿ ಹುಳುಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ವರ್ಷದಲ್ಲಿ 5–6 ಸಲ ಈ ಪ್ರಕ್ರಿಯೆ ಮಾಡಬಹುದು.

**ಎರೆಗೊಬ್ಬರಕ್ಕೆ ಪ್ರೇರಣೆ :** ಹರೀಶ್ ಅವರ ಈ ಗೊಬ್ಬರ ತಯಾರಿಕೆಯ ನಗರಗಳಲ್ಲಿ ದೊಡ್ಡ ತಲೆನೋವಾಗಿರುವ ತ್ಯಾಜ್ಯ ವಿಲೇವಾರಿ ಕಷ್ಟವನ್ನು ತಗ್ಗಿಸಲು ಸಹಕಾರಿಯಾಗಿದೆ. ಹರೀಶ್‌ರಿಂದ ಪ್ರೇರಣೆಗೊಂಡ ಮಂಗಳೂರಿನ ಕೆಲವೊಂದು ವಿದ್ಯಾ ಸಂಸ್ಥೆಗಳು ಇಂತಹ ಗೊಬ್ಬರ ತಯಾರಿ ಘಟಕವನ್ನು ಹಾಕಿವೆ. ಮಾತ್ರವಲ್ಲದೆ, 'ವಿ ಮ್ಯಾನೇಜ್ ಅವರ್ ವೇಸ್ಟ್ ಅವರ್ ಸೆಲ್ಫ್' ಎಂಬ ಘೋಷಣಾ ಫಲವನ್ನು ಅಳವಡಿಸಿದೆ. 925 ಕೆ.ಜಿ. ಗೊಬ್ಬರ ತಯಾರಿಸಿ ಪ್ರತಿ ಕೆಜಿಗೆ ರೂ. 15ರಂತೆ ಮಾರಾಟ ಮಾಡಿ ರೂ. 2.50 ಲಕ್ಷ ಆದಾಯಗಳಿಸಿದೆ. ಇದುವರೆಗೂ ರೂ. 13 ಸಾವಿರ ಮೌಲ್ಯದ ಹುಳವನ್ನೂ ಸಂಸ್ಥೆ ಮಾರಾಟ ಮಾಡಿದೆ. ಕಾರ್ಕಳ ನಗರಸಭೆ 20ಟನ್ ಎರೆ ಗೊಬ್ಬರ ಮಾರಾಟ ಮಾಡಿ ಸುಮಾರು ರೂ. 3.75 ಲಕ್ಷ ಆದಾಯಗಳಿಸಿದೆ. ಇದರಿಂದ 60 ಟನ್ ನಷ್ಟು ತ್ಯಾಜ್ಯಕ್ಕೂ ಮುಕ್ತಿ ನೀಡಿದೆ. ಕುಂಬಳೆಯ ಬಿ.ಕಾಂ ಪದವೀಧರ ಜಯರಾಮ ಒಂದೇ ವರ್ಷದಲ್ಲಿ 6 ಟನ್ ಗೊಬ್ಬರ ಉತ್ಪಾದಿಸಿ. ರೂ. 1.28 ಲಕ್ಷ ಆದಾಯ ಗಳಿಸಿದ್ದಾರೆ. ಕಾರ್ಕಳದ ರೈತ ಲಕ್ಷ್ಮಣ 6 ತಿಂಗಳಲ್ಲಿ ಸುಮಾರು ರೂ. 60 ಸಾವಿರ ಮೌಲ್ಯದ ಗೊಬ್ಬರ ಮಾರಾಟ ಮಾಡಿ ಆದಾಯ ಗಳಿಸಿದ್ದಾರೆ.



**ಈ ವಿಧಾನ ಹಳ್ಳಿ ಮಹಿಳೆಯರಿಗೆ, ನಿರುದ್ಯೋಗಿ ಯುವಕರಿಗೆ ಅಲ್ಪ ಬಂಡವಾಳದಲ್ಲಿ ಸಾಕಷ್ಟು ಹಣ ಸಂಪಾದನೆ ಮಾಡುವ ಒಂದು ಮಾರ್ಗವೂ ಆಂತದೆ.**

**ಡಾ. ಎಸ್. ಹರೀಶ್ ಜೋಶಿ,**
ನಿವೃತ್ತ ಪ್ರಾಧ್ಯಾಪಕ, ಮಂಗಳೂರು.

**2018**

**2018**

# ಕೃಷಿ ಹೊಂಡಕ್ಕೆ ನೆರಳು ಪರದೆ

ಕೃಷಿ ಹೊಂಡಕ್ಕೆ ಅಳವಡಿಸುವ ನೆರಳು ಪರದೆ ನೀರಿನ ಉಳಿತಾಯ ಜತೆಗೆ ಪ್ರಾಣಹಾನಿ ತಪ್ಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಸರ್ಕಾರ ಕೂಡ ಕೃಷಿ ಭಾಗ್ಯ ಯೋಜನೆ ಅಡಿ ರೈತರ ಜಮೀನುಗಳಲ್ಲಿ ನಿರ್ಮಿಸಿಕೊಂಡಿರುವ ಕೃಷಿ ಹೊಂಡಕ್ಕೆ ಪರದೆ ಭಾಗ್ಯ ಕಲ್ಪಿಸುವ ಯೋಜನೆ ಹಾಕಿಕೊಂಡಿದೆ.

ರಾಜ್ಯಾದ್ಯಂತ ಕೃಷಿ ಭಾಗ್ಯ ಯೋಜನೆಯಡಿ 1.70 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. ಕೃಷಿಹೊಂಡಕ್ಕೆ ನೆರಳು ಪರದೆ ವಿತರಿಸುವ ಯೋಜನೆಯನ್ನು ಈ ಹಿಂದೆಯೇ ಅನುಷ್ಠಾನಗೊಳಿಸಿದ್ದರೂ ಅದು ಸಮರ್ಪಕವಾಗಿ ಜಾರಿಯಾಗಿರಲಿಲ್ಲ. ಕೃಷಿ ಹೊಂಡದಲ್ಲಿ ಜನ, ಜಾನುವಾರುಗಳು ಬಿದ್ದು ಸಾವು–ನೋವು ಸಂಭವಿಸುತ್ತಿದ್ದರಿಂದ ಸರ್ಕಾರ ಅಕ್ಟೋಬರ್ 25ರಂದು ಮರು ಆದೇಶ ಹೊರಡಿಸಿ ಪ್ರತಿಯೊಬ್ಬ ಫಲಾನುಭವಿಗೆ ಈ ಯೋಜನೆ ತಲುಪಿಸುವಂತೆ ಕೃಷಿ ಇಲಾಖೆಗೆ ಸೂಚಿಸಿದೆ. ಪ್ರತಿ ಕೃಷಿ ಹೊಂಡಕ್ಕೆ ಪರದೆ ಅಳವಡಿಸಲು ರೈತರಿಗೆ ಶೇ. 50 ರಷ್ಟು ಸಹಾಯಧನ ಲಭ್ಯವಿರುತ್ತದೆ.

### ಪ್ರಾಣ, ನೀರು ರಕ್ಷಣೆಗೆ ಪರೆದೆ

25 ಜಿಲ್ಲೆಗಳ 132 ತಾಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆ ಅನುಷ್ಠನಗೊಳಿಸಲಾಗಿದೆ. ಕೃಷಿ ಹೊಂಡಗಳ ಸುತ್ತಲೂ ರಕ್ಷಣೆಗೆ ಯಾವುದೇ ಕ್ರಮ ತೆಗೆದುಕೊಳ್ಳದೆ ಇರುವುದರಿಂದ ಇತ್ತೀಚಿನ ದಿನಗಳಲ್ಲಿ ಜನ–ಜಾನುವಾರುಗಳು ಸಾವನ್ನಪ್ಪುತ್ತಿರುವ ಘಟನೆಗಳು



ನಡೆಯುತ್ತಿವೆ. ಕೃಷಿ ಹೊಂಡದಲ್ಲಿ ಸಂಗ್ರಹವಾಗುವ ನೀರು ಕೂಡ ಆವಿಯಾಗಿ ಪೋಲಾಗುತ್ತಿದೆ, ಇದನ್ನು ನಿಯಂತ್ರಿಸಿ ಬೆಳೆ ಅವಧಿಯಲ್ಲಿ ನೀರು ಬಳಕೆ ಮಾಡಿಕೊಳ್ಳಲು ಹಾಗೂ ಪ್ರಾಣ ಹಾನಿ ತಪ್ಪಿಸಲು ಹೊಂಡಗಳಿಗೆ ನೆರಳು ಪರದೆ ಅಳವಡಿಸಿಕೊಳ್ಳಲು ಸರ್ಕಾರ ಈ ಸಹಾಯಧನ ನೀಡುತ್ತಿದೆ.

### ಸೌಲಭ್ಯ ಪಡೆಯುವ ವಿಧಾನ

ರೈತರು ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಕೃಷಿ ಹೊಂಡದ ಗಾತ್ರಕ್ಕೆ ತಕ್ಕಂತೆ ಪರದೆಯನ್ನು ಸರ್ಕಾರ ನಿಗದಿಪಡಿಸಿದ ದರದಲ್ಲಿ ಖರೀದಿಸಿ ಅಳವಡಿಸಿಕೊಳ್ಳಬಹುದು. ನಂತರ ಕೃಷಿ ಅಧಿಕಾರಿಗಳ ಜೊತೆ ಇದ್ದ ಪೋಟೋ ತೆಗೆಸಿ ಕೃಷಿ ಇಲಾಖೆಗೆ ಕಳುಹಿಸಿದರೆ ಸರ್ಕಾರ ರೈತರ ಖಾತೆಗೆ ಸಹಾಯಧನ ಬಿಡುಗಡೆ ನೇರವಾಗಿ ಮಾಡಲಾಗುತ್ತಿದೆ.

**– ರವೀಂದ್ರ ಹನಗಂಡಿ, ಪ್ರಗತಿಪರ ರೈತ. ಜಮಖಂಡಿ.**

---

## ಕಲಬುಗಿ ಹಾಲು ಒಕ್ಕೂಟಕ್ಕೆ – ಜಪಾನ್ ಸರ್ಕಾರದ ತಜ್ಞರ ಬೇಟಿ



ಭಾರತ ದೇಶದ ಸಹಕಾರಿ ಕ್ಷೇತ್ರದಲ್ಲಿ ಹೈನುಗಾರಿಕೆಯ ಬೆಳವಣಿಗೆ, ಗ್ರಾಮೀಣ ಮಟ್ಟದಲ್ಲಿ ಹಾಲಿನ ಉತ್ಪಾದನೆ, ಅದರ ಶೇಖರಣೆ, ಸಾಗಾಣಿಕೆ, ಡೇರಿಗಳಲ್ಲಿ ನಿರ್ವಹಣೆ ವ್ಯವಸ್ಥೆ ಹಾಗು ಹಾಲು ಮತ್ತು ಹಾಲಿನ ವಿವಿಧ ಉತ್ಪನ್ನಗಳ ಮಾರುಕಟ್ಟೆ ಬಗ್ಗೆ ಅಧ್ಯಯನ ನಡೆಸಿ ಹೈನುಗಾರಿಕೆ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಜಪಾನ ಸರಕಾರವು ಜಪಾನ ಅಂತರಾಷ್ಟ್ರೀಯ ಸಹಕಾರಿ ಅಸೋಸಿಯೇಶನ್ (ಜೈಕಾ)ನ ಪ್ರತಿನಿಧಿಗಳನ್ನು ಭಾರತಕ್ಕೆ ಕಳುಹಿಸಿದೆ. ಈ ನಿಯೋಗವು ಗುಜರಾತ್, ಮಧ್ಯಪ್ರದೇಶ, ಬಿಹಾರ, ಅಸ್ಸಾಮ್, ಕರ್ನಾಟಕ ಹಾಗು ಉತ್ತರ ಪ್ರದೇಶ ರಾಜ್ಯಗಳ ಕೆಲವೊಂದು ಹಾಲು ಉತ್ಪಾದಕ ಸಹಕಾರಿ ಒಕ್ಕೂಟಗಳನ್ನು ಭೇಟಿ ನೀಡಿ ಅಧ್ಯಯನ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಈ ನಿಯೋಗವು ಕರ್ನಾಟಕದ ಬೆಂಗಳೂರು ಮತ್ತು ಕಲಬುರಗಿ ಹಾಲು ಒಕ್ಕೂಟವನ್ನು ಆಯ್ಕೆ ಮಾಡಿ ಕಲಬುರಗಿ ಹಾಲು ಒಕ್ಕೂಟಕ್ಕೆ ಭೇಟಿ ನೀಡಿದೆ.

---


**ಕ್ಷೀರಸಾಗರ ಮಾಸಪತ್ರಿಕೆ**

ರಾಜ್ಯ ಸಹಕಾರಿ ಹೈನುಗಾರರ ಮಾರ್ಗದರ್ಶಿ
ಕ್ಷೀರಸಾಗರ ಚಂದಾದಾರರಾಗಲು
ವಾರ್ಷಿಕ ಚಂದಾ ರೂ. : 50.00
ಅಜೀವ ಚಂದಾ ರೂ. : 900.00ರ
ಮೊತ್ತವನ್ನು ಚೆಕ್ ಅಥವಾ ಡಿಡಿಯನ್ನು
Managing Director, KMF, Bangalore ರವರ
ಹೆಸರಿಗೆ ಪಡೆದು ಕೊಳ್ಳುವುದು.

ಡಿ.ಡಿ.ಯನ್ನು ಪತ್ರದ ಮುಖೇನ ತಮ್ಮ ಪೂರ್ಣ ವಿಳಾಸ, ಪಿನ್‌ಕೋಡ್ ಮತ್ತು ಮೊಬೈಲ್ ನಂ. ಅನ್ನು ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.
ಸಂಪಾದಕರು, ಕ್ಷೀರಸಾಗರ ಪತ್ರಿಕೆ, ಕರ್ನಾಟಕ ಹಾಲು ಮಹಾ ಮಂಡಳಿ,
ಕೆ.ಎಂ.ಎಫ್. ಕಾಂಪ್ಲೆಕ್ಸ್, ಡಾ. ಎಂ.ಹೆಚ್. ಮರೀಗೌಡ, ಬೆಂಗಳೂರು – 560 029.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಸಾರ್ವಜನಿಕ ಸಂಪರ್ಕಾಧಿಕಾರಿ
ದೂರವಾಣಿ : 9513998826, 080–26096828
ಕ್ಷೀರಸಾಗರ ಪತ್ರಿಕೆಯಲ್ಲಿ ಪ್ರಕಟಿಸಲು ಉತ್ತಮ ಲೇಖನಗಳನ್ನು ನೀಡಬಯಸುವವರು ಇ–ಮೇಲ್ : pro@kmf@coopಗೆ ಕಳುಹಿಸಿ ಕೊಡಲು ಕೋರಿದೆ.



ಸಿ.ಎಂ. ನವೀನ್‌ಕುಮಾರ್

## "ಯುವಕರು ಕೀಳರಿಮೆ ಬಿಡಿ" ನೌಕರಿ ಬಿಟ್ಟು ಕೃಷಿಯಲ್ಲಿ ಗಟ್ಟಿಗರಾದ ಸ್ವಾಭಿಮಾನಿಗಳು

ಸಾಮಾನ್ಯವಾಗಿ ಯುವಕರು ಕೃಷಿಯಿಂದ ವಿಮುಖರಾಗಿದ್ದಾರೆ. ಬಹುತೇಕರು ಸರ್ಕಾರಿ ನೌಕರಿ ಹಿಂದೆಬಿದ್ದಿದ್ದಾರೆ. ಆದರೆ, ಇಲ್ಲೊಬ್ಬ ಯುವಕ ಮನೆ ಬಾಗಿಲಿಗೆ ಬಂದ ಸರ್ಕಾರಿ ನೌಕರಿ ತ್ಯಜಿಸಿ ಕೃಷಿಯುತ್ತ ಮುಖ ಮಾಡಿದ್ದಾನೆ. ಅಷ್ಟೇ ಅಲ್ಲ. ಈಗ ಆಹುದ್ದೆಗೆ ಬರುವ ಸಂಬಳದ ದುಪ್ಪಟ್ಟು ಹಣ ದುಡಿಯುತ್ತಿದ್ದಾರೆ ! ಹತ್ತು ವರ್ಷದ ಹಿಂದಿನ ಮಾತು. ಹಾಸನದ ಅರಕಲಗೂಡಿನ ಚಿಕ್ಕಬೊಮ್ಮನ ಹಳ್ಳಿಯ ಸಿ.ಎಂ. ನವೀನ್‌ಕುಮಾರ್ ಅವರಿಗೆ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆ ಅರಸಿ ಬಂದಿತ್ತು. ಊರಿನವರೆಲ್ಲಾ ಕರ್ತವ್ಯಕ್ಕೆ ಹಾಜರಾಗುವಂತೆ ಒತ್ತಾಯಿಸಿದ್ದರು. ಆದರೆ, ನವೀನ್ ಆದೇಶದ ಪ್ರತಿ ಹರಿದುಹಾಕಿ, ಜಮೀನಿನತ್ತ ಮುಖಮಾಡಿದರು. ಪರಿಣಾಮ ತಿಂಗಳಿಗೆ 50 ಸಾವಿರ ರೂ. ಗಳಿಸುತ್ತಿದ್ದಾರೆ.

ಬಿಎ ಪದವಿ ಬಳಿಕ ಊರಲ್ಲಿ ಓಡಾಡಿಕೊಂಡಿದ್ದ ನವೀನ್‌ಕುಮಾರ್‌ಗೆ ಸಿಕ್ಕಿದ್ದು ನಿರುದ್ಯೋಗ ಪಟ್ಟ. ಹಠಕ್ಕೆ ಬಿದ್ದು, 'ತಮಗೂ ಸರ್ಕಾರಿ ನೌಕರಿ ಗಿಟ್ಟಿಸಿ ಕೊಳ್ಳುವ ಸಾಮರ್ಥ್ಯವಿದೆ'. ಎಂಬುದನ್ನು ಪೊಲೀಸ್ ಕಾನ್‌ಸ್ಟೇಬಲ್ ಆಗಿ ನೇಮಕಗೊಂಡು ಸಾಬೀತು ಮಾಡಿದರು. ಆದರೆ, ಆ ಕೆಲಸಕ್ಕೆ ಹೋಗದೆ ವೃತ್ತಿಗೆ ಕೃಷಿ ಆಯ್ದುಕೊಂಡರು. ಅದರಲ್ಲಿ ಯಶಸ್ವಿಯೂ ಆದರು. ತಾಲೂಕಿನ ಅತ್ಯುತ್ತಮ ರೈತ ಎಂಬ ಹೆಸರಿಗೂ ಪಾತ್ರರಾದರು.

ಬೆಂಗಳೂರು ಕೃಷಿ ಮೇಳದಲ್ಲಿ 'ಅತ್ಯುತ್ತಮ ರೈತ' ಪ್ರಶಸ್ತಿ ಸ್ವೀಕರಿಸಿ 'ಉದಯವಾಣಿ'ಯೊಂದಿಗೆ ನವೀನ್‌ಕುಮಾರ್ ತಮ್ಮ ಅನುಭವ ಹಂಚಿಕೊಂಡರು.

'ಊರಿನ ಜನ ಮತ್ತು ಸಂಬಂಧಿಕರ ಚುಚ್ಚುಮಾತುಗಳಿಂದ ನಾನು ನೌಕರಿಗೆ ಅರ್ಜಿ ಹಾಕಿದ್ದೆ. ಆದರೆ, ಜೀವನದ ನೆಮ್ಮದಿಗಾಗಿ ನೌಕರಿ ತೊರೆದು ಕೃಷಿ ಆಯ್ಕೆ ಮಾಡಿಕೊಂಡೆ. ಇಂದು ಅದೇ ಪೊಲೀಸ್ ನೌಕರಿಯಲ್ಲಿ ಪಡೆಯುವುದಕ್ಕಿಂತ ದುಪ್ಪಟ್ಟು ವೇತನ ಪಡೆಯುತ್ತಿದ್ದೇನೆ. ತಿಂಗಳಿಗೆ ನೂರಾರು ಜನ ನನ್ನ ಜಮೀನಿಗೆ ಭೇಟಿ ನೀಡುತ್ತಾರೆ. ಯಾರ ಹಂಗೂ ಇಲ್ಲ. ಸ್ವಾಭಿಮಾನ ಬದುಕು ನಡೆಸುತ್ತಿದ್ದೇನೆ' ಎನ್ನುತ್ತಾರೆ ನವೀನ್.

**ಸಾರ್ಥಕ ಸಾಧನೆ :** ಹಾಗಂತ, ಆರಂಭದಲ್ಲಿ ಕೃಷಿ ಖುಷಿ ಕೊಡಲಿಲ್ಲ. ಹೊಲದಲ್ಲಿ 14 ಬೋರ್‌ವೆಲ್‌ಗಳನ್ನು ಕೊರೆದು, ಕೈಚೆಲ್ಲಿ ಕುಳಿತಿದ್ದೆ, ಅನೇಕರು ಟೀಕಿಸಿದರು. ಮನಸ್ಸಿಗೆ ನೋವಾಯಿತು. ಆದರೆ, ಕೊನೆಗೆ ಎರಡು ಬೋರ್‌ವೆಲ್‌ಗಳಲ್ಲಿ ಒಂದು ಇಂಚು ನೀರು ಜಿನುಗಿತು. ಆ ಮೂಲಕ ಕೃಷಿ ಕೈಹಿಡಿಯಿತು. ಅದರಿಂದ ಈಗ ಸಮಗ್ರ ಕೃಷಿ ಜತೆಗೆ ಹೈನುಗಾರಿಕೆ ಮಾಡುತ್ತಿದ್ದೇನೆ. ವರ್ಷಕ್ಕೆ 6 ರಿಂದ 7 ಲಕ್ಷ ರೂ. ನಿವ್ವಳ ಆದಾಯ ಗಳಿಸುತ್ತಿದ್ದೇನೆ. ಅಪ್ಪ-ಅಮ್ಮ ಸಂಬಂಧೀಕರು, ಊರಿನವರೆಲ್ಲಾ ಹೆಮ್ಮೆಪಡುವಂತಾಗಿದೆ. ಸಾಧನೆ ಸಾರ್ಥಕ ಎನಿಸುತ್ತಿದೆ ಎಂದು ತಿಳಿಸಿದರು.

ಜಮೀನಿನಲ್ಲಿ ರಾಗಿ, ಮುಸುಕಿನಜೋಳ, ಅಲಸಂದೆ, ಅವರೆ, ಮತ್ತಿತರ ತರಕಾರಿ, ಕಾಳುಮೆಣಸು, ಕಾಫಿ, ಅಡಿಕೆ, ಪಪ್ಪಾಯ, ಹಲಸು, ಶುಂಠಿ ಬೆಳೆಯುತ್ತಿದ್ದೇನೆ. ಸಾವಯವ ಗೊಬ್ಬರದಿಂದ ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಂಡಿದ್ದೇನೆ. ಹೈನಾಗಾರಿಕೆಯೂ ಜೊತೆಗಿದೆ ಎನ್ನುತ್ತಾರೆ.

### ಯುವಕರು ಕೀಳರಿಮೆ ಬಿಡಿ

ಸಾಕಷ್ಟು ಈ ಕೆಸರಿನಲ್ಲಿ ಕೆಲಸ ಮಾಡಬೇಕೇ ? ಎಂಬ ಕೀಳರಿಮೆಯನ್ನು ಮೊದಲು ಯುವಕರು ಬಿಡಬೇಕು. ಕೈಕೆಸರಾದರೆ, ಬಾಯಿ ಮೊಸರು ಎಂಬುದನ್ನು ಅರಿಯಬೇಕು ಎನ್ನುತ್ತಾರೆ ಈ ಯುವ ರೈತರು.

## ಬ್ಯಾಂಕ್ ಕೆಲಸ ತೊರೆದ – ಕೃಷಿಗೆ ಬಂದ !

ಹಾಸನದ ಹೊಸೂರು ಗ್ರಾಮದ **ಟಿ.ಎಂ. ಶಿವಕುಮಾರ್** ಕೂಡ ಐಸಿಐಸಿಐ ಬ್ಯಾಂಕಿನಲ್ಲಿ ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆ ಕೆಲಸ ತೊರೆದು ಈಗ ಕೃಷಿಗೆ ಟೊಂಕಕಟ್ಟಿ ನಿಂತಿದ್ದಾರೆ. ಅತ್ಯುತ್ತಮ ರೈತ ಪ್ರಶಸ್ತಿ ಸ್ವೀಕರಿಸಿ ತಮ್ಮ ಅನಿಸಿಕೆ ಹಂಚಿಕೊಂಡರು. ಜನರ ಟೀಕೆ, ಅಪ್ಪ-ಅಮ್ಮನ ಪ್ರತಿರೋಧದ ನಡುವೆಯೂ ಕೇವಲ ಎರಡು ಎಕರೆ ಜಮೀನಿನಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡರು. ಸತತ ಪರಿಶ್ರಮದಿಂದ ವಾರ್ಷಿಕ 2 ರಿಂದ 3 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಸಮಗ್ರ ಕೃಷಿ ಅಳವಡಿಸಿಕೊಂಡಿದ್ದು, ಹನಿ ಮತ್ತು ತುಂತುರು ನೀರಾವರಿ ಪದ್ಧತಿಯಲ್ಲಿ ಪಪ್ಪಾಯ ಸಸಿ ಖುದ್ದು ಸಸಿ ಮಡಿ ಮಾಡಿ, ಉತ್ತಮ ಸಸಿಗಳನ್ನು ಬೆಳೆಸಿ ನೇರ ಮಾರುಕಟ್ಟೆಗೆ ಮಾರಾಟ ಮಾಡುತ್ತಿದ್ದು. ಹೈನುಗಾರಿಕೆಗೆ ಸುಧಾರಿತ ಹುಲ್ಲಿನ ತಳಿ ಬೆಳೆಯುತ್ತಿದ್ದಾರೆ. ಕಾಫಿ, ಬಾಳೆ, ಅಡಿಕೆ, ಸಿಲ್ವಾರ, ಮೆಣಸು, ಹೆಬ್ಬೇವು ಮತ್ತಿತರ ಬೆಳೆ ಬೆಳೆಯುತ್ತಿದ್ದೇನೆ ಈಗ ಅಪ್ಪ-ಅಮ್ಮ ಕೂಡ ಕೈಜೋಡಿಸಿದ್ದಾರೆ ಎಂದರು.

**ಪದ್ಮವಿಭೂಷಣ**

## ಕ್ಷೀರ ಬ್ರಹ್ಮ



**ಡಾ. ವರ್ಗೀಸ್ ಕುರಿಯನ್**

ಸಹಕಾರ ಸಂಘ, ಸೃಷ್ಟಿ ಮಾಡಿದೆ
ಜನರಿಗೆ ಸಹಕಾರ ತತ್ವದ ಹರಿವು ಮೂಡಿಸಿದೆ
ಈ ಸಂಸ್ಥೆ ಬೃಹದಾಕಾರವಾಗಿ ಬೆಳೆಸಿದೆ
ವಿಶ್ವದವರೆಲ್ಲರ ಗಮನ ಸೆಳೆದೆ
ನೀವು ರೂಪಿಸಿದಂತಾ ಹಾಲಿನ ಯೋಜನೆ
ಅದ್ಬುತವಾಗಿ ಬೆಳೆಯುತ್ತಿದೆ. ದಿನೆ ದಿನೆ
ಇದು ನೀ ಮಾಡಿದಂತಾ ದೊಡ್ಡ ಸಾದನೆ
ಈಗ ಜನ ನೆನೆಯುವುದು ನಿಮ್ಮ ಹೆಸರನ್ನೇ
ಬೆಳೆಯುತ್ತಿವೆ ಸಂಘಗಳು ಮಿತಿ ಮೀರಿ
ನಿಮ್ಮದೇ ಇದಕ್ಕೆಲ್ಲಾ ನಯವಾದ ದಾರಿ
ಈ ಯೋಜನೆಯ ಮುಖ್ಯರೂವಾರಿ
ನಿಮಗೆ ನಾವೆಂದಿಗೂ ಆಭಾರಿ
ನೀವು ಹೈನೋದ್ಯಮದ ಪಿತಾಮಹರು
ಪ್ರತಿಭೆ ಪ್ರತಿಷ್ಠೆಯುಳ್ಳ ಪ್ರತಿಭಾವಂತರು
ನಮ್ಮ ಹಾಲು ಮನೆತನದ ಆಪ್ತಮಿತ್ರರು
ನಿಮ್ಮನ್ನು ಪೂಜಿಸುವರು ಹಲವಾರು ಜನರು
ಹಸು ಸೃಷ್ಟಿ ಮಾಡಿದರು ಆ ಮಹಾ ಬ್ರಹ್ಮ
ಬಿಳಿಕ್ರಾಂತಿ ಮಾಡಿದ ನೀವು ನಮ್ಮ ಕ್ಷೀರ ಬ್ರಹ್ಮ
ಕುರಿಯನ್ ನಮ್ಮ ಕ್ಷೀರ ಬ್ರಹ್ಮ
ಒಮ್ಮೆ ಕೈಮುಗಿಯೋ ಅಣ್ಣ ತಮ್ಮ.



ರಚನೆ : ಜಿ.ಎಂ. ವೆಂಕಟೇಶ್,
ಗೊಳ್ಳುಚಿನ್ನಪ್ಪನಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು,
ಮೊ. : 9742762895

**2018**

2018





# ದುರ್ಬಲ ವರ್ಗದ ಮಹಿಳೆಯರ ಸ್ವಾವಲಂಬನೆಗಾಗಿ ಕ್ಷೀರ ಸಂಜೀವಿನಿ ಹಂತ –2



**ಡಾ : ಕೆ. ಸ್ವಾಮಿ.,** ನಿರ್ದೇಶಕರು, (ಸ್ಟೆಪ್), ಕಹಾಮ. ಕೇಂದ್ರ ಕಛೇರಿ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂಸ್ಥೆ (NRLM) ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ (KSRLPS) ಗಳ ಶೇ.90% ಅನುದಾನದ ಮೂಲಕ ಎಲ್ಲಾ 14 ಹಾಲು ಒಕ್ಕೂಟಗಳ 300 ಹಾಲು ಉತ್ಪಾದಕರ ಮಹಿಳಾ ಸಂಘಗಳಲ್ಲಿ **"ಕ್ಷೀರ ಸಂಜೀವಿನಿ ಹಂತ–2"** ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು 3 ವರ್ಷದ ಅವಧಿಯಲ್ಲಿ ಅನುಷ್ಠಾನಗೊಳಿಸ ಬೇಕಾಗಿರುತ್ತದೆ. ಇದರ ಯೋಜನಾ ವೆಚ್ಚವು ಒಟ್ಟು ರೂ.3115 ಲಕ್ಷಗಳಾಗಿದ್ದು, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯ (KSRLPS) ಅನುದಾನ ರೂ.2803.5 ಲಕ್ಷಗಳು ಹಾಗೂ ಕಹಾಮ / ಒಕ್ಕೂಟಗಳ ವಂತಿಕೆ ರೂ.311.50 ಲಕ್ಷಗಳು ಇರುತ್ತದೆ.

ಪ್ರತಿ ಹಾಲು ಉತ್ಪಾದಕರ ಮಹಿಳಾ ಸಂಘದಲ್ಲಿ 60 ಮಂದಿಯಂತೆ 300 ಸಂಘಗಳಲ್ಲಿ ಒಟ್ಟು 18000 ದುರ್ಬಲ ವರ್ಗದ ಮಹಿಳೆಯರು ಈ ಯೋಜನೆಯ ಫಲಾನುಭವಿ–ಗಳಾಗಿರುತ್ತಾರೆ. ಈ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಾಗೂ ಸಂಘಗಳಿಗೆ ಕೆಳಕಂಡ ಸೌಲಭ್ಯಗಳು ದೊರೆಯುತ್ತದೆ.

1. **ಮೊದಲು ಪ್ರತಿ ಸಂಘದ 24 ಫಲಾನುಭವಿಗಳಿಗೆ 3–4 ಸ್ವಸಹಾಯ ಗುಂಪುಗಳ ಮೂಲಕ ಹೈನುರಾಸು ಖರೀದಿಗಾಗಿ ಪ್ರತಿ ಸದಸ್ಯರಿಗೆ ತಲಾ ರೂ.20,000/– ಅಂಚಿನ ಹಣದ ಸೌಲಭ್ಯ.**
2. **ನಂತರ ಈ ಅಂಚಿನ ಹಣವನ್ನು ಹಂತ ಹಂತವಾಗಿ ಜಮಾ ಮಾಡಿ Rotation ಆಧಾರದ ಮೇಲೆ ಇನ್ನುಳಿದ ಫಲಾನುಭವಿಗಳಿಗೆ ಹೈನುರಾಸು ಖರೀದಿಗೆ ಅಂಚಿನ ಹಣದ ಸೌಲಭ್ಯ.**
3. **ಎಲ್ಲಾ 60 ಫಲಾನುಭವಿಗಳಿಗೆ ಮೊದಲ ಸುತ್ತಿನ ಹೈನುರಾಸು ಖರೀದಿ ನಂತರ ಎರಡನೇ ಸುತ್ತಿನಲ್ಲಿ ಇದೇ ರೀತಿ ಅಂಚಿನ ಹಣ ನೀಡಿ ಎರಡನೇ ಹೈನುರಾಸು ನೀಡುವ ಸೌಲಭ್ಯ.**
4. **ಎಲ್ಲಾ 18000 ಮಂದಿ ಫಲಾನುಭವಿಗಳಿಗೆ ಕಹಾಮದ ತರಬೇತಿ ಕೇಂದ್ರಗಳಲ್ಲಿ ಹೈನುರಾಸು ನಿರ್ವಹಣಾ ತರಬೇತಿ.**
5. **ಪ್ರತಿ ಹಾಲು ಉತ್ಪಾದಕರ ಮಹಿಳಾ ಸಂಘಗಳಲ್ಲಿ 3 ಸ್ವಸಹಾಯ ಗುಂಪುಗಳಂತೆ ಒಟ್ಟು 900 ಸ್ವಸಹಾಯ ಗುಂಪುಗಳ ಬಲವರ್ಧನೆಗಾಗಿ ಪ್ರತಿ ಸ್ವಹಾಯ ಗುಂಪಿಗೆ ತಲಾ ರೂ.15,000/– ರಂತೆ ಪ್ರಾರಂಭಿಕ ಅನುದಾನದ ಸೌಲಭ್ಯ.**
6. **ಈ ಯೋಜನೆಯಲ್ಲಿ ನಂದಿನಿ ಸ್ವಸಹಾಯ ಗುಂಪಿನ 1800 ಪ್ರತಿನಿಧಿಗಳಿಗೆ ಕಹಾಮ ತರಬೇತಿ ಕೇಂದ್ರಗಳಲ್ಲಿ ತರಬೇತಿ.**
7. **ಮಹಿಳಾ ಸಂಘಗಳ ಮಟ್ಟದಲ್ಲಿ ಫಲಾನುಭವಿಗಳಿಗಾಗಿ ನುರಿತ ತಜ್ಞರಿಂದ ಹಣಕಾಸು ಸಾಕ್ಷರತೆ, ಹೈನುರಾಸು ಆರೋಗ್ಯ ಶಿಬಿರ, ಹಸಿರು ಮೇವು ಮತ್ತು ಪಶು ಆಹಾರ ಶಿಬಿರ, ಗೃಹಬಳಕೆ ತ್ಯಾಜ್ಯ ನಿರ್ವಹಣೆ, ಶಿಶು ಮಕ್ಕಳ ಪೌಷ್ಠಿಕ ಆಹಾರದ ಅರಿವು ಕಾರ್ಯಕ್ರಮಗಳು ಹಾಗೂ ಪ್ರತಿ ಒಕ್ಕೂಟದ ಒಂದು ಮಹಿಳಾ ಸಂಘದಲ್ಲಿ Digital ಸಾಕ್ಷರತೆಯ ಸೌಲಭ್ಯ.**
8. **ಪ್ರತಿ ಸಂಘಕ್ಕೆ ಪೀಠೋಪಕರಣದ ಅನುದಾನ ರೂ.10,000/– ಮತ್ತು ಸೋಲಾರ್ ಪ್ಯಾಕ್ ಅಳವಡಿಸಲು ರೂ.25,000/–ಗಳ ಸೌಲಭ್ಯವಿರುತ್ತದೆ.**
9. **ಪ್ರಥಮ ಚಿಕಿತ್ಸೆ ತರಬೇತಿ/ ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ಸೌಲಭ್ಯ.**
10. **9 ಮಹಿಳಾ ಸಂಖ್ಯೆಯ ಕೃತಕ ಗರ್ಭಧಾರಣಾ ತರಬೇತಿ ಹಾಗೂ ಕೃತಕ ಗರ್ಭಧಾರಣಾ ಉಪಕರಣಗಳ ಪೂರೈಕೆಯ ಸೌಲಭ್ಯಗಳನ್ನು ನೀಡಲಾಗುವುದು.**
11. **ಪ್ರತಿ ಸಂಘದ ಆದ್ಯತಾ ಗುಂಪಿನ ಸದಸ್ಯರಿಗೆ ಮತ್ತು ರಾಸುಗಳಿಗೆ ಔಷಧೀಯ ಸಸ್ಯಗಳ ಮೂಲಕ ಆಯುರ್ವೇದ ಚಿಕಿತ್ಸೆಯ ತರಬೇತಿ ನೀಡುವುದು.**
12. **ಪ್ರತಿ ಒಕ್ಕೂಟದ ಒಂದು ಸಂಘಕ್ಕೆ ಇತರೆ ಆದಾಯ ತರುವಂತಹ ಚಟುವಟಿಕೆಗೆ ರೂ.2.0 ಲಕ್ಷಗಳ ಅನುದಾನ**
13. **ಮೂರು ವರ್ಷದ ಈ ಯೋಜನೆಯ ಅವಧಿಯಲ್ಲಿ 18000ದುರ್ಬಲ ವರ್ಗದ ಮಹಿಳಾ ಫಲಾನುಭವಿಗಳಿಗೆ ಬ್ಯಾಂಕ್ ಲಿಂಕೇಜ್ ಮೂಲಕ ತಲಾ 2 ಹೈನುರಾಸು ವಿನಂತೆ 36000 ಹೈನುರಾಸು ನೀಡುವ ಸೌಲಭ್ಯ.**

ಈ ಯೋಜನೆಯಲ್ಲಿನ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿ NRLM ಮಾರ್ಗಸೂಚಿಯಂತೆ 50% ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, 15% ಅಲ್ಪ ಸಂಖ್ಯಾತರಯ, 3% ಅಂಗವಿಕಲರು ಫಲಾನುಭವಿಗಳು ಇರಬೇಕಾಗಿರುತ್ತದೆ.







# ಪ್ರಶ್ನೋತ್ತರ

ಡಾ|| ಎಂ.ಎಸ್. ರಮೇಶ್ ಮೊ.: 9740069903



ಸಿದ್ದರಾಮಯ್ಯ, ಹೂಲಿಹಳ್ಳಿ ಹಾಲು ಸಂಘ,

ಪ್ರಶ್ನೆ1: ನಮ್ಮ ಸಂಘದಲ್ಲಿ ಸಾಲಿನ ಆಡಿಟ್ ಆಗುವವರೆಗೂ ಬೋಣಸ್ ಕೊಡುವುದಿಲ್ಲ ಎನ್ನುತ್ತಾರೆ. ಏಕೆ?

ಉತ್ತರ: ಪ್ರತಿ ಸಾಲಿನಲ್ಲಿ ಸಂಘದ ಆಡಿಟ್ ಆದನಂತರವೆ ಬೋನಸ್ನ ಪ್ರಮಾಣ ತಿಳಿಯುತ್ತದೆ. ಹಾಗಾಗಿ ಪ್ರತಿ ಬಾರಿ ಆಡಿಕ್ ಆದ ನಂತರವೇ ಬೋನಸ್ ನೀಡಲಾಗುತ್ತದೆ.

ನಂಜಪ್ಪ, ಪುರ ಹಾಲು ಸಂಘ

ಪ್ರಶ್ನೆ: 2. ನಮ್ಮ ಮನೆಯ ಹಸುಗಳು ಎರಡಕ್ಕೆ ಕರು ಹಾಕಿದ ಎರಡು ತಿಂಗಳ ನಂತರ ತಿಂಡಿ ಕಡಿಮೆ ಮಾಡಿದವು. ಹಾಲು ಖಡಿಮೆ ಆಯ್ತು. ಮೂತ್ರ ತಪಾಸಣೆ ಮಾಡಿದ ನಂತರ ಅದಕ್ಕೆ ಇರುವ ಕಾಯಿಲೆಗೆ ಚಿಕಿತ್ಸೆ ಮಾಡಿದರು. ಇದು ಎಂತಹ ಕಾಯಿಲೆ?

ಉತ್ತರ: ನಿಮ್ಮ ಪತ್ರ ಓದಿದಾಗ ನಿಮ್ಮ ಹಸುಗಳಿಗೆ ಕೀಟೋಸಿಸ್ ಕಾಯಿಲೆ ಇರಬೇಕೆಂದು ಅನ್ನಿಸುತ್ತದೆ. ಈ ಕಾಯಿಲೆ ಬಂದ ಹಸುಗಳ ಮೂತ್ರ ತಪಾಸಣೆ ಮಾಡಿದ ನಂತರ ಕಾಯಿಲೆಯ ಬಗ್ಗೆ ಖಾತರಿ ಮಾಡಿಕೊಂಡು ಚಿಕಿತ್ಸೆ ಮಾಡಿರುತ್ತಾರೆ ಪಶು ವೈದ್ಯರು.

ಮಹದೇವಪ್ಪ, ಶಿವನಹಳ್ಳಿ ಹಾಲು ಸಂಘ

ಪ್ರಶ್ನೆ3 : ಸಾರ್, ನಮ್ಮ ಇಲಾಯಿತಿ ರಾಸೊಂದು ನಾಲ್ಕು ತಿಂಗಳು ಗರ್ಭವಾಗಿದ್ದಾಗ ಒಂದು ಬಾರಿ ಕಂದು ಹಾಕಿದೆ. ಈಗ ಪಶು ವೈದ್ಯರು ಮುಂದೆ ಹಾಗೆ ಆಗದ ಹಾಗೆ ಇಂಜಕ್ಷನ್ನು ಕೊಡಬೇಕು ಅಂತಾರೆ, ಸರಿಯಾ?

ಉತ್ತರ: ಪಶುವೈದ್ಯರು ರಾಸನ್ನು ಪರೀಕ್ಷಿಸಿದ್ದರೆ ಹಾಗೂ ಅವರ ಸಲಹೆಯ ಮೇರೆಗೆ ಮೂರನೆಯ, ನಾಲ್ಕನೆಯ ಹಾಗೂ ಐದನೆಯ ತಿಂಗಳಿಗೆ ಅದೇ ತಾರೀಖಿಗೆ ಇಂಜೆಕ್ಷನ್ ಹಾಕಿಸಬೇಕು. ದಯವಿಟ್ಟು ಗಮನಿಸಿ! ಪಶುವೈದ್ಯರ ಸಲಹೆ ಇಲ್ಲದೆ ಈ ಚಿಕಿತ್ಸೆ ಮಾಡಿಸಬಾರದು.

ಮುನಿವೆಂಕಟಪ್ಪ, ಮಾಡರಹಳ್ಳಿ ಹಾಲು ಸಂಘ

ಪ್ರಶ್ನೆ4. ನಮ್ಮ ರಾಸೊಂದು ಮೂರು ತಿಂಗಳ ಹಿಂದೆ ಕರು ಹಾಕಿದ ನಂತರ ಕಸ ಬೀಳುವುದು ತಡವಾಯಿತು. ಆಮೇಲೆ ಬೆದೆಗೆ ಬಂದಾಗ ಗರ್ಭ ತೊಳೀಬೇಕು ಅಂತಾರೆ ಸಂಘದವರು. ಯಾಕೆ?

ಉತ್ತರ: ಕರು ಹಾಕಿದ ನಂತರ ಕಸ ಬೀಳುವುದು ತಡವಾದರೆ ಕೆಲವು ವೇಳೆ ಗರ್ಭಕೋಶದಲ್ಲಿ ನಂಜು ಹಾಗೆಯೇ ಉಳಿಯುವ ಸಂದರ್ಭಗಳು ಇರುತ್ತವೆ. ನಂಜಿದ್ದಾಗ ರಾಸು ಗರ್ಭ ಧರಿಸುವುದು ತೊಂದರೆಯಾಗಬಹುದು. ಅಂತಹ ಸಂದರ್ಭಗಳಲ್ಲಿ ಸೆಮನ್ ಮಾಡಿದ ಕೂಡಲೇ ಗರ್ಭಕೋಶಕ್ಕೆ ಔಷಧಿ ಹಾಕುತ್ತಾರೆ. ಇದರಿಂದ ರಾಸುಗಳ ಗರ್ಭ ಧರಿಸುವ ಸಾಧ್ಯತೆ ಹೆಚ್ಚಾಗುತ್ತದೆ.

ಕೆ.ಆರ್ ವಿಜಯಕುಮಾರ್, ಚಟ್ನನಹಳ್ಳಿ ಹಾಲು ಸಂಘ

ಪ್ರಶ್ನೆ5. ನಮ್ಮ ಸಂಘದಲ್ಲಿ ರೈತರು ಫಲ ಆಗದಿರುವ ರಾಸುಗಳಿಗೆ ಎರಡು ಸೆಮನ್ ಮಾಡು ಎಂದು ಬಲವಂತ ಮಾಡುತ್ತಾ ಇರುತ್ತಾರೆ. ಅದರಿಂದ ಏನು ಲಾಭ?

ಉತ್ತರ: ಎರಡು ವೀರ್ಯ ನಳಿಕೆಗಳನ್ನು ಒಂದೇ ಬಾರಿಗೆ ಉಪಯೋಗಿಸಿದರೆ ಯಾವ ಲಾಭವೂ ಇಲ್ಲ. ಇನ್ನೂ ವೀರ್ಯ ನಳಿಕೆಯು ದಂಡವಾಗುತ್ತದೆ. ಹಾಗೆ ಮಾಡಬೇಡಿರಿ.

ರೂಪ ರಾಮನಗೌಡ, ಮರಿಯಾಲ ಹಾಲು ಸಂಘ

ಪ್ರಶ್ನೆ6. ನಮ್ಮ ಊರಿನಲ್ಲಿ ಬಹಳಷ್ಟು ರಾಸುಗಳು ಫಲ ನಿಲ್ಲದೇ ಇದ್ದು ತೊಂದರೆಯಾಗಿದೆ. ನೀವು ಏನಾದರೂ ಮಾಡಲು ಸಾಧ್ಯವೆ?

ಉತ್ತರ: ನಿಮ್ಮ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಪಶುವೈದ್ಯರನ್ನು ಸಂಪರ್ಕಿಸಿ ರಾಸುಗಳ ಬಂಜೆತನ ನಿವಾರಣಾ ಶಿಬಿರವನ್ನು ಆಯೋಜಿಸುವಂತೆ ಕೋರಿಕೆ ಸಲ್ಲಿಸಿರಿ. ಅಂತಹ ಶಿಬಿರಗಳಲ್ಲಿ ತಜ್ಞ ಪಶುವೈದ್ಯರನ್ನು ನಿಯೋಜಿಸಿ ರಾಸುಗಳಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತದೆ.

ಕೆ.ಎನ್.ಶ್ರೀಧರ್, ರಾಮೇನಹಳ್ಳಿ ಹಾಲು ಸಂಘ.

ಪ್ರಶ್ನೆ7. ಸಾರ್, ಸರ್ಕಾರದ ಪ್ರೋತ್ಸಾಹ ಹಣದ ನೆರವಿಲ್ಲದಂತೆ ರೈತರಿಗೆ ಹಾಲಿನ ದರವನ್ನು ಕ.ಹಾ.ಮ. ದವರು ಹೆಚ್ಚಿಸಲು ಸಾಧ್ಯವಾಗುವುದಿಲ್ಲವೇ?

ಉತ್ತರ: ಹಾಲಿನ ದರವನ್ನು ಹಾಲು ಉತ್ಪಾದಕರಿಗೆ ನೀಡುತ್ತಿರುವುದು ಹಾಲು ಒಕ್ಕೂಟದವರು. ಕರ್ನಾಟಕ ಸರ್ಕಾರವು ಒಟ್ಟಾರೆಯಾಗಿ ಎಲ್ಲಾ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನವನ್ನು ನೀಡುತ್ತಿದೆ. ಹಾಲಿನ ಹಣದ ಬಗ್ಗೆ ನೀವು ನಿಮ್ಮ ಹಾಲು ಒಕೂಟವನ್ನು ಸಂಪರ್ಕಿಸಿರಿ.



## "ರಾಯಚೂರು ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ನಡೆದ ಕೃಷಿ ಮೇಳದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ "

ದಿನಾಂಕ: 08.12.2017 ರಿಂದ 11.12.2017 ರವರೆಗೆ ಕರ್ನಾಟಕ ಹಾಲು ಮಹಾಮಂಡಳಿ ನಿ. ಬೆಂಗಳೂರು ಹಾಗೂ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ., ಇವರ ಸಂಯುಕ್ತ ಆಶ್ರಯದಲ್ಲಿ ರಾಯಚೂರಿನ ಕೃಷಿ ವಿಶ್ವ ವಿದ್ಯಾನಿಲಯ ಆವರಣದಲ್ಲಿ ನಡೆದ ಕೃಷಿ ಮೇಳದಲ್ಲಿ **"ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ"**ವನ್ನು ಆಯೋಜಿಸಲಾಗಿತ್ತು.

ಸದರಿ ಕೃಷಿ ಮೇಳದಲ್ಲಿ ಭಾಗವಹಿಸಿದ ಸಾವಿರಾರು ರೈತರು ಮತ್ತು ಗ್ರಾಹಕರಿಗೆ ವಿವಿಧ ನಂದಿನಿ ಉತ್ಪನ್ನಗಳ ಪರಿಚಯ ಮಾಡಿಕೊಡಲಾಯಿತು. ಕಾರ್ಯಕ್ರಮದಲ್ಲಿ ಕಹಾಮದ ಬಳ್ಳಾರಿ ಮಾರಾಟ ಮಳಿಗೆಯ ಮುಖ್ಯಸ್ಥರಾದ **ಶ್ರೀ. ಗಣೇಶ್ ಬಾಬು** ಹಾಗೂ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಉಪವ್ಯವಸ್ಥಾಪಕರಾದ **ಶ್ರೀ. ವೈ. ಚಂದ್ರಶೇಖರ್‌ರೆಡ್ಡಿ**ರವರು ಭಾಗವಹಿಸಿರುತ್ತಾರೆ.

## ಇತಿಹಾಸ ಪ್ರಸಿದ್ಧ ನಾಗನಕೆರೆ ಜಾತ್ರಾ ಮಹೋತ್ಸವದಲ್ಲಿ "ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರದರ್ಶನ"





ದಿನಾಂಕ: 08.12.2017ರಂದು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ನಾಗನಕೆರೆ ಜಾತ್ರಾ ಮಹೋತ್ಸವದಲ್ಲಿ **"ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ"** ವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಜಾತ್ರಾ ಮಹೋತ್ಸವದ ಆಯೋಜಕರು ಹಾಗೂ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಮಾಜಿ ನಿರ್ದೇಶಕರಾದ ಸನ್ಮಾನ್ಯ **ಶ್ರೀ ನರಸಿಂಹಮೂರ್ತಿ**ರವರನ್ನು ತುಮಕೂರು ಮಾರಾಟ ಮಳಿಗೆಯ ಮುಖ್ಯಸ್ಥರಾದ **ಶ್ರೀ ಸೋಮಶೇಖರ್**ರವರು ಸನ್ಮಾನಿಸಿದರು. ಕಾರ್ಯಕ್ರಮ ದಲ್ಲಿ ಭಾಗವಹಿಸಿದ ಸಾವಿರಾರು ಭಕ್ತಾದಿಗಳಿಗೆ ನಂದಿನಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸಿ ಉತ್ಪನ್ನಗಳ ಮಾರಾಟವನ್ನು ಮಾಡಲಾಯಿತು.

**ವರದಿ: ಡಾ. ಬಸವರಾಜು.ಕೆ.ಎಸ್,**
ಜಂಟಿ ನಿರ್ದೇಶಕರು (ಮಾ&ವಿ), ಕಹಾಮ

## ರಾಷ್ಟ್ರೀಯ ಗುಣನಿರ್ವಹಣೆ ಸಮ್ಮೇಳನ



ಕಹಾಮದ ನಂದಿನಿ ಹಾಲು ಉತ್ಪನ್ನಗಳ ಘಟಕ ರಾಷ್ಟ್ರಮಟ್ಟದ ಎನ್.ಸಿ.ಕ್ಯೂ.ಸಿ ಸ್ಪರ್ಧೆಯಲ್ಲಿ ಭಾಗವಹಿಸಿ **ಉತ್ಕೃಷ್ಟ ಗಣಮಟ್ಟ** (Excellence) ಪ್ರಶಸ್ತಿ ಪಡೆದು ಕಹಾಮ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ರಾಕೇಶ್ ಸಿಂಗ್**, ಭಾ.ಆ.ಸೇ. ರವರೊಂದಿಗೆ ಸಂತಸವನ್ನು ಹಂಚಿಕೊಳ್ಳುತ್ತಿರುವ ನಂದಿನಿ ಹಾಲು ಉತ್ಪನ್ನ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು.




Printed at : Vinay Kumar, Published by : **Sri Rakesh Singh,** I.A.S., Managing Director KMF on behalf of Karnataka Co-operative Milk Producers Federation ltd., and Printed at **Sri Venkateshwara Enterprises,** # 56/A, 9th Main, 1st Cross, Kaverinagar, BSK Ii Stage, Banashankari Industrial Area, Bengaluru - 560 070. Ph.: 080-26711380, Mob.: 98455 82152 E-mail: vinayaka1000@yahoo.com and Published at Karnataka Co-operative Milk Producers Federation Ltd., KMF Complex, Dr. Marigowda Road, Bengaluru-560 029. Editor : **Dr. D.N. Hegde**, Director A.H.